Publication : Prajavani
Date: February 16, 2015
Page No: 1, Metro
Edition: Bangalore

SARA Media Net
Simply communicate...

# ‘ನಿರುತ್ತರ’ದಲ್ಲಿ ರಾಹುಲ್ ದನಿ ಬನಿ



ತೊಡಗುವರಂತೆ ರಾಹುಲ್.

‘ನಿರುತ್ತರ’ದಲ್ಲಿ ರಾಹುಲ್ ಅವರದ್ದು ಶ್ರೀಮಂತ ಉದ್ಯೋಗಿ ಪಾತ್ರ. ‘ಸದಾ ಕೆಲಸದಲ್ಲೇ ಮಗ್ನನಾಗಿರುವ ವ್ಯಕ್ತಿಯೊಬ್ಬ ತನ್ನ ವೈಯಕ್ತಿಕ ವಿಚಾರಗಳಲ್ಲಿ ಸೋಲುವ, ಬುದ್ಧಿ, ಹೃದಯದ ಮಧ್ಯೆ ತೊಡಕಾಡುವ, ತಲ್ಲಣಿಸುವ ಒಂದು ಪಾತ್ರ. ಈ ಪಾತ್ರಕ್ಕೆ ತಮ್ಮ ಕೈಲಾದಷ್ಟು ಶಕ್ತಿ ತುಂಬಿದ್ದೇನೆ’ ಎಂದು ಖುಷಿಯಲ್ಲಿ ಹೇಳಿಕೊಳ್ಳುತ್ತಾರೆ.

‘ಕೆಲವೊಮ್ಮೆ ತಮ್ಮ ಪ್ರೀತಿ ಪಾತ್ರರನ್ನು ಚೆನ್ನಾಗಿ ನೋಡಿಕೊಳ್ಳಲೆಂದೇ ಹಗಲು ರಾತ್ರಿ ಕಷ್ಟಪಡುತ್ತೇವೆ. ಅಲ್ಲಿ ಹಣ ಮುಖ್ಯವಾಗುವುದಿಲ್ಲ. ಆ ಜೀವಗಳಿಗೆ ನಮ್ಮ ಪ್ರೀತಿ ಬೇಕಿರುತ್ತದೆ, ಸಮಯ ಬೇಕಿರುತ್ತದೆ. ಪ್ರೀತಿ ವ್ಯಕ್ತಪಡಿಸುವಿಕೆಯೂ ಒಬ್ಬೊಬ್ಬರದ್ದು ಒಂದೊಂದು ರೀತಿ. ಪ್ರೀತಿಯದ್ದು ಸಹಜ ಸಾವಲ್ಲ, ಅದನ್ನು ಕೊಲ್ಲುತ್ತಾರೆ ಎಂಬುದನ್ನು ಈ ಚಿತ್ರ ಮನಮುಟ್ಟುವಂತೆ ತೋರಿಸಿದೆ’ ಎಂದು ಭಾವುಕವಾಗಿ ಮಾತನಾಡಿದರು ಅವರು.

ಅಂದಹಾಗೆ ‘ನಿರುತ್ತರ’ದ ಶೀರ್ಷಿಕೆಗೆ ತಕ್ಕಂತೆಯೇ ಕತೆಯನ್ನು ಹೊಂದಿಸಲಾಗಿದೆಯಂತೆ. ನಗರ ಪ್ರದೇಶಗಳಲ್ಲಿ ನಿತ್ಯ ಬದುಕಿನ ಜಂಜಾಟಗಳಿಂದ ಸಂಬಂಧಗಳ ಅರ್ಥ ಬದಲಾಗಿಬಿಡುತ್ತದೆ. ಹಿಂದೆ ಮುಖ್ಯವಾಗಿದ್ದವೆಲ್ಲಾ ದಿನದಿಂದ ದಿನಕ್ಕೆ ಮಸುಕಾಗುತ್ತಾ ಹೋಗುತ್ತದೆ. ಪಡೆಯುವ ಹಂಬಲದಲ್ಲಿ ಮುಖ್ಯವಾದದ್ದನ್ನು ಕಳೆದುಕೊಳ್ಳುತ್ತಿರುತ್ತೇವೆ. ಇಂಥ ಕೆಲವು ಸಂಬಂಧಗಳನ್ನು ಕೆದಕುತ್ತಾ ಹೋದಾಗ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ಆ ಕಾರಣಕ್ಕೆ ಚಿತ್ರಕ್ಕೆ ‘ನಿರುತ್ತರ’ ಎಂದು ಹೆಸರಿಡಲಾಗಿದೆಯಂತೆ. ಹಿಮಾಚಲ ಪ್ರದೇಶ, ಗೋವಾ, ರಾಜಸ್ಥಾನ್‌ನಲ್ಲಿ ಚಿತ್ರೀಕರಣ ಮಾಡಿವಾಗಿದ್ದು, ಏಪ್ರಿಲ್ ಕೊನೆ ವಾರಕ್ಕೆ ಸಿನಿಮಾ ತೆರೆಗೆ ತರುವ ಆಲೋಚನೆಯನ್ನು ಚಿತ್ರತಂಡ ಮಾಡಿದೆ.

-ಸುಮಲತಾ ಎನ್.

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**